* ಸಿಗದವನಿಗೆ ಹುಡುಕಬೇಡಿ,
ಬಾರದವನಿಗೆ ಕಾಯಬೇಡಿ,
ಕೊಡದವನನ್ನು ಕೇಳಬೇಡಿ

* Always speak what you feel, and never be sorry for speaking so

ಶ್ರೀಸಾಮಾನ್ಯರೊಂದಿಗೆ ಸಮಾಜಸೇವೆ

# ಸುಜನ ಸಮಾಜ

SUJANA SAMAJA

ಸಂಪುಟ : 1 | ಸಂಚಿಕೆ ಬೆಲೆ ರೂ. 4.00 ಮಾತ್ರ | ಪುಟ : 4 | ಸಂಚಿಕೆ : 2

ಸಂಪಾದಕರು: ವಿ. ಶ್ರೀನಿವಾಸ

ದಿನಾಂಕ: 10-11-2015

**ಧರ್ಮದರ್ಶಿ ಮಂಡಳಿ**

ಅಧ್ಯಕ್ಷರು:
**ರಾ.ಕೃ. ಶ್ರೀಧರಮೂರ್ತಿ**
9449695864

ಉಪಾಧ್ಯಕ್ಷರು :
**ಡಾ॥ ಕೆ.ಎಂ.ರಂಗ ಧಾಮಶೆಟ್ಟಿ**
9845782110

ಕಾರ್ಯದರ್ಶಿ :
**ವಿ.ಶ್ರೀನಿವಾಸ**
9342064009


ಸಹಕಾರ್ಯದರ್ಶಿ :
**ಟಿ.ಎಸ್. ನಾರಾಯಣ ಮೂರ್ತಿ**
9632819020

ಕೋಶಾಧಿಕಾರಿಗಳು :
**ಹೆಚ್.ಎಸ್.ನಾಗರಾಜ**
8971481888

ಸದಸ್ಯರು :
**ಪಿ.ವಿ. ನಾಗಲತಾ**
9845810730


**ಸುಮಂಗಲಿ**
9900903996

**ಕಚೇರಿ ವೇಳೆ**
ಸಂಜೆ 5.00ರಿಂದ 6.00 ಘಂಟೆ



**ನಾಡಿನ ಸಮಸ್ತ ಜನತೆಗೆ**

**ದೀಪಾವಳಿ ಹಬ್ಬದ ಶುಭಾಶಯಗಳು**



## ಶುಭ ಆರಂಭ

**ಯಾವುದೇ** ಚಟುವಟಿಕೆಯಾಗಲಿ ಅದಕ್ಕೆ ಒಂದು ಗುರಿ ಎಂಬುದು ಇದ್ದೇ ಇರುತ್ತದೆ. ಚಟುವಟಿಕೆಯಲ್ಲಿ ತೊಡಗಿರುವವರು ಗುರಿಮುಟ್ಟಲು ಸದಾ ಕಾರ್ಯಶೀಲರಾಗಿಯೆ ಇರುತ್ತಾರೆ. ಅವರಿಗೆ ತಮ್ಮ ಗುರಿ ಮುಟ್ಟುವವರೆಗೆ ಸಮಾಧಾನ ಇರುವುದಿಲ್ಲ. ಇಂಥಹ ಮನೋಭಾವದಿಂದ ಕಾರ್ಯಸಾಧನೆಗೆ ಹೊರಟವರೆ "ಸುಜನ ಸಮಾಜ" ದ ಪ್ರವರ್ತಕರು. ಸಂಸ್ಥೆಯ ಅಸ್ತಿತ್ವದ ಬಗ್ಗೆ ತಿಳಿದ ತಕ್ಷಣ ಪ್ರವರ್ತಕರನ್ನು ಸಂಪರ್ಕಿಸಿ ಅವರಿಗೆ ಬೆಂಬಲ ಸೂಚಿಸಿದ ಜನಸಾಮಾನ್ಯರು ಸಂಸ್ಥೆ ಹಾಗೂ ಅದರ ಮುಖಾಂತರ ಸಮಾಜಸೇವೆ ಮಾಡಲು ಹೊರಟಿರುವ ಅದರ ನಿರ್ವಾಹಕರಿಗೆ ಎಂದೆಂದೂ ಒಂದು ಶಕ್ತಿ. ನಮ್ಮ ಸಂಸ್ಥೆಯ ಬಗ್ಗೆ ಈಗಾಗಲೇ ಹಲವು ನೂರು ಮಂದಿ ಸಂತೋಷ ವ್ಯಕ್ತಪಡಿಸಿ, ಅದರೊಂದಿಗೆ ಸಮಾಜ ಸೇವೆ ಮಾಡಲು ಮುಂದೆ ಬಂದಿರುವ ಹತ್ತು ಹಲವಾರು ಮಂದಿಗೆ ಸಂಸ್ಥೆ ವಂದಿಸುತ್ತದೆ.

ಸಂಸ್ಥೆ ಯೋಜಿಸಿರುವ, ಹಿರಿಯ ನಾಗರೀಕರಿಗಾಗಿ, ಕಾಶಿ, ಗಯಾ, ಅಲಹಾಬಾದ್ ಸ್ಥಳಗಳ ಪ್ರವಾಸಕ್ಕೆ ಹೆಚ್ಚಿನ ರೀತಿ ಪ್ರೋತ್ಸಾಹ ವ್ಯಕ್ತವಾಗಿ ಪ್ರವಾಸ ಫೆಬ್ರವರಿ ಮಾಹೆ ಹದಿನೈದರಂದು ಆರಂಭವಾಗುವುದು. ಅದರ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ನೀಡುತ್ತೇವೆ.

2016-17ನೇ ಶೈಕ್ಷಣಿಕ ವರ್ಷದಿಂದ ತಂತ್ರಜ್ಞಾನದ ಪದವಿ ವಿದ್ಯಾರ್ಥಿಗಳಿಗೆ ಆರಂಭಿಸಲು ತೀರ್ಮಾನಿಸಿರುವ "ಪುಸ್ತಕ ಭಂಡಾರ" ದ ಯೋಜನೆ ಬಗ್ಗೆ ಈಗಾಗಲೇ ಹಲವಾರು ಮಂದಿ ವಿವರ ತಿಳಿಯಲು ಬಯಸಿದ್ದು, ಅದನ್ನು ಇಷ್ಟರಲ್ಲೆ ಎಲ್ಲರಿಗೂ ತಿಳಿಸಲಾಗುವುದು.

ದಸರೆ ಹಬ್ಬ ಮುಗಿದಿದ್ದು ಕನ್ನಡ ರಾಜ್ಯೋತ್ಸವವನ್ನು ಒಂದನೆ ತಾರೀಖಿನಿಂದಲೇ ಆಚರಿಸಲು ಕನ್ನಡಿಗರು ಆರಂಭಿಸಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕದ ಜನರಲ್ಲಿ ಜಾಗೃತಿ ಮೂಡಿಸಿ ಅದರ ಅಸ್ತಿತ್ವಕ್ಕೆ ಕಾರಣರಾದವರನ್ನು ನೆನೆಯುವುದು ಎಲ್ಲರ ಜವಾಬ್ದಾರಿಯಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲೆ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂದು ಜನಮನವನ್ನು ತಟ್ಟಿ ಎಬ್ಬಿಸಿದ ಮಾನ್ಯ ಶ್ರೀ ಹುಯಿಲಗೋಳ ನಾರಾಯಣರಾಯರನ್ನು, ಅದನ್ನು ತಮ್ಮ ಸುಶ್ರಾವ್ಯ ಕಂಠದಿಂದ

ಮುಂದಿನ ಪುಟಕ್ಕೆ..

**BOOK POST : Packet Contains only Printed Mater. Postage is Paid as per Articles 6.2 of the Postal Tariff**

**From :**
**SUJANA SAMAJA**
# 20/1, Siddashrama Road,
17th Cross, Malleshwaram,
Bengaluru - 560 003
Mobile : 9449695864 / 9342064009

To,

ಹಿಂದಿನ ಪುಟದಿಂದ...

ಜನಸಾಮಾನ್ಯರ ಹೃದಯಕ್ಕೆ ತಲುಪಿಸಿದ ವಿಖ್ಯಾತ ಗಾಯಕರಾದ ಶ್ರೀ ಪಿ.ಕಾಳಿಂಗರಾಯರನ್ನು ಹಾಗೂ ಕನ್ನಡ ಕುಲಪುರೋಹಿತರೆಂದು ಖ್ಯಾತರಾದ ಶ್ರೀ ಆಲೂರು ವೆಂಕಟರಾಯರನ್ನು ಕನ್ನಡಿಗರು ಮರೆಯಲು ಸಾಧ್ಯವಿಲ್ಲ. ಅಂತೆಯೆ ಯಾವ ಕ್ಷಣದಲ್ಲಾದರೂ ರಾಜ್ಯದ ಮುಖ್ಯಮಂತ್ರಿಯಾಗಲು ಅರ್ಹರಾಗಿ, ನಾಡು ಒಂದಾದ ಹೊರತು ಮುಖ್ಯಮಂತ್ರಿ ಆಗುವುದಿಲ್ಲವೆಂದು ಪಣತೊಟ್ಟ ಮಾನ್ಯ ಶ್ರೀ ನಿಜಲಿಂಗಪ್ಪನವರನ್ನು ಎಂದೆಂದಿಗೂ ನೆನೆಪಿಸಿಕೊಳ್ಳುವುದು ಎಲ್ಲರ ಕರ್ತವ್ಯವಾಗಿದೆ. ನಾಡು ಪ್ರಗತಿ ಪಥದಲ್ಲಿರುವುದು ಎಲ್ಲರಿಗೂ ತಿಳಿದಿದೆ. ಆದರೆ ಪ್ರಗತಿಯ ವೇಗ ಇರಬೇಕಾದ ವೇಗದಲ್ಲಿ ಇರದಿರುವುದು ಮನಸ್ಸಿಗೆ ನೋವು ಉಂಟಾಗಬಹುದಾದ ವಿಷಯ. ಪ್ರಕೃತಿ ಮಾತೆ ನಮಗೆ ನೀಡಿರುವ ಜಲ, ಖನಿಜ, ಭೂಮಿ ಎಲ್ಲರಿಗೂ ಸೇರಿದ್ದು, ಅವುಗಳಿಂದ ಅತಿ ಹೆಚ್ಚಿನ ರೀತಿ ಉಪಯೋಗ ಪಡೆದುಕೊಳ್ಳಲು ಎಲ್ಲರೂ ಸಹಕರಿಸಿ ಕಾರ್ಯನಿರತರಾಗುವ ಬದಲಾಗಿ, ಅವುಗಳು ಕೆಲವು ಭಾಗಗಳವರಿಗೆ ಮಾತ್ರ ಸೇರಿದ್ದೆಂಬ ಅಭಿಪ್ರಾಯ, ರಾಜ್ಯದ ಪ್ರಗತಿಗೆ ಮಾರಕವಾಗುವ ಪರಿಸ್ಥಿತಿಗೆ ನಾವು ತಲುಪುತ್ತಿದ್ದೇವೆ ಎಂದರೆ ತಪ್ಪಿಲ್ಲ. ಕರ್ನಾಟಕ ರಚನೆಯಾಗಿ ಅರವತ್ತು ವರ್ಷ ತುಂಬುತ್ತಾ ಬರುತ್ತಿರುವ, ಈ ಸಂದರ್ಭದಲ್ಲಾದರೂ, ನಾವು "ಎಲ್ಲಿಯೆ ಇರು, ಎಂತೆಯೇ ಇರು ಕನ್ನಡಿಗನಾಗಿರು" ಎಂಬ ನಾಣ್ಣುಡಿಯಂತೆ ನಡೆಯಲು ಸಂಕಲ್ಪತೊಟ್ಟು ಕಾರ್ಯನಿರತರಾದಲ್ಲಿ ಮಾತ್ರ ನಾಡಿನ ಪ್ರಗತಿ. ಜನ ಸಾಮಾನ್ಯರ ಜೀವನ ಸುಖಮಯ. ನಾಡಿನ ಪ್ರಗತಿ ಹೆಚ್ಚಾಗಲಿ, ಜನರ ಸುಖ ನೆಮ್ಮದಿ ಹೆಚ್ಚಾಗಲಿ.

ದೀಪಾವಳಿಯ ಸಡಗರ ಬರುತ್ತಿದೆ. ಮಕ್ಕಳಿಗಂತೂ ಪಟಾಕಿಯ ಆನಂದ ಅಬ್ಬರಗಳಂತೂ ಸಂತೋಷ ತರುತ್ತದೆ. ಈ ಸಂದರ್ಭದಲ್ಲಿ ಇತ್ತೀಚೆಗೆ ವಾಯುಮಾಲಿನ್ಯ, ಶಬ್ದಮಾಲಿನ್ಯ, ವಾತಾವರಣದ ಮಾಲಿನ್ಯದ ಬಗ್ಗೆ ಅರಿವು ಹೆಚ್ಚಾಗುತ್ತಿರುವುದು ಶುಭ ಚಿಹ್ನೆಯಾಗಿದೆ. ಪಟಾಕಿಗಳ ತಯಾರಿಯ ಉದ್ಯಮದಲ್ಲಿ ದುಡಿಯುತ್ತಿರುವ ಕಿರಿಯ ಮಕ್ಕಳ ಆರೋಗ್ಯ ಹಾಗೂ ಅವರ ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ರೀತಿ ಯೋಚಿಸಿ ಕರ್ತವ್ಯ ನಿರತರಾಗುವುದು ಎಲ್ಲರ ಕರ್ತವ್ಯ. ದುಡಿಯುವ ಮನಸ್ಸಿಗೆ ಅಹ್ಲಾದವೂ ಮುಖ್ಯ ಅದರಂತೆ ಸಾಮಾಜಿಕ ಜವಾಬ್ದಾರಿಯೂ ಹೆಚ್ಚಿನದು. ಬನ್ನಿ ಸಂತೋಷಿಸೋಣ. ಎಲ್ಲರಿಗೂ ಆನಂದ ಉಣಿಸೋಣ.

## ಸುಜನ ಸಮಾಜದ 'ಸೇವಾ ಬಳಗ' ಕ್ಕೆ ಸೇರಿರುವವರು

**ಶ್ರೀ ವಿ.ನಾಗೇಶ್**, ಬೆಂಗಳೂರು

**ಶ್ರೀ ಕೆ.ಆರ್. ನಾರಾಯಣಮೂರ್ತಿ**, ಬೆಂಗಳೂರು

**ಶ್ರೀ ಎಲ್. ಸಚ್ಚಿದಾನಂದಪ್ರಸಾದ್**, ಬೆಂಗಳೂರು

**ಶ್ರೀ ಜಿ.ವಿ. ಬ್ರಹ್ಮದೇವ**, ಬೆಂಗಳೂರು

**ಪ್ರೊ. ಜೆ. ರಾಮಕೃಷ್ಣ**, ಬೆಂಗಳೂರು

**ಶ್ರೀ ಎನ್.ಶ್ರೀನಿವಾಸ್**, ಬೆಂಗಳೂರು

**ಶ್ರೀ ವೈ.ಕೆ.ಹನುಮಂತಶೆಟ್ಟಿ**, ಮೈಸೂರು

**ಶ್ರೀ ವೈ.ವಿ. ರಾಮನಾಥನ್**, ಬೆಂಗಳೂರು

**ಶ್ರೀ ಬಿ. ರಾಮರಾವ್**, ಬೆಂಗಳೂರು

**ಶ್ರೀ ಡಿ. ಗೋಪಾಲ ರಾವ್**, ಬೆಂಗಳೂರು

### ರಾ.ಕೃ.ಶ್ರೀಧರಮೂರ್ತಿ, ಅಧ್ಯಕ್ಷರು



ವೃತ್ತಿಯಲ್ಲಿ ವಕೀಲರಾಗಿ, ಪ್ರವೃತ್ತಿಯಲ್ಲಿ ಸಮಾಜ ಸೇವಕರಾಗಿ ತಮ್ಮ ಇಪ್ಪತ್ತನೆ ವಯಸ್ಸಿನಿಂದಲೆ ಸ್ಥಳೀಯ, ಹಾಗೂ ರಾಜ್ಯಮಟ್ಟದ ಹಲವಾರು ಸಂಘ ಸಂಸ್ಥೆಗಳಲ್ಲಿ ಜವಾಬ್ದಾರಿ ಸ್ಥಾನಗಳನ್ನು ನಿರ್ವಹಿಸಿ, ಅವುಗಳ ಶ್ರೇಯೋಭಿವೃದ್ಧಿಗೆ ಕಾರಣರಾಗಿರುವವರು ಈಗ ಕರ್ನಾಟಕ ರಾಜ್ಯ ಹಿರಿಯ ನಾಗರೀಕರ ವೇದಿಕೆಗಳ ಒಕ್ಕೂಟದ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಅದರ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಉಪಸಮಿತಿಯ ಚೇರ್ಮನ್‌ರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯದ ಬೇರೆ ಬೇರೆ ಕಡೆ ವಿದ್ಯಾಸಂಸ್ಥೆಗಳ ಸ್ಥಾಪನೆ ಹಾಗೂ ಸಂಘಟನೆಗಳಿಗೆ ಕಾರಣರಾಗಿದ್ದಾರೆ. ಸಹಕಾರಿ ಕ್ಷೇತ್ರದಲ್ಲೂ ಹಲವಾರು ಸಂಸ್ಥೆಗಳಲ್ಲಿ ಜವಾಬ್ದಾರಿವಹಿಸಿಕೊಂಡು ಅವುಗಳ ಮುನ್ನಡೆಗೆ ಕಾರಣರಾಗಿದ್ದಾರೆ. ಇವರ ನೇತೃತ್ವದಲ್ಲಿ ಆರಂಭಗೊಂಡ ಹಲವು ಸಂಸ್ಥೆಗಳು ರಜತೋತ್ಸವಗಳನ್ನು ಆಚರಿಸಿಕೊಂಡಿವೆ. ಇವರು ಕೇವಲ ಎಪ್ಪತ್ತೈದು ವರ್ಷಗಳ ತರುಣರಾಗಿದ್ದಾರೆ.

### ಡಾ|| ಕೆ.ಎಂ. ರಂಗಧಾಮ ಶೆಟ್ಟಿ, ಉಪಾಧ್ಯಕ್ಷರು

ಈಗಿನ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕೋಡಿಹಳ್ಳಿಯಲ್ಲಿ ಜನಿಸಿ ಹಲವಾರು ಪದವಿಗಳನ್ನು ಪಡೆದು, ಸಮಾಜ ಸೇವೆಯನ್ನು ಒಂದು ವ್ರತದಂತೆ ನಡೆಸಿಕೊಂಡು ಬರುತ್ತಿರುವ, ಇವರು ಮೇ|| ಸುಬ್ರಹ್ಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್, ವಾಸವಿ ಜ್ಞಾನ ಪೀಠ ವಿದ್ಯಾಸಂಸ್ಥೆಗಳ ಅಧ್ಯಕ್ಷರಾಗಿ, ಕನ್ನಡ ಭಾರತಿ ಎಜುಕೇಷನ್ ಸೊಸೈಟಿ, ಅಮರಜ್ಯೋತಿ ಎಜುಕೇಷನ್ ಸೊಸೈಟಿ, ಬೆಂಗಳೂರು ಇನ್ಸಿಟ್ಯೂಟ್ 'ಆಫ್ ಮ್ಯಾನೇಜ್‌ಮೆಂಟ್, ವಿಶ್ರಾಂತಿಧಾಮ ಹಿರಿಯ ನಾಗರಿಕರ ಸಂಸ್ಥೆ ಹಾಗೂ ಹಲವಾರು ಸಂಘ ಸಂಸ್ಥೆಗಳ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಹಲವಾರು ಸೇವಾ ಸಂಸ್ಥೆಗಳಲ್ಲಿ ಸಕ್ರಿಯ ಆಜೀವ ಸದಸ್ಯರಾಗಿ ಅವುಗಳ ಬೆಳವಣಿಗೆಗೆ ಕಾರಣರಾಗಿದ್ದಾರೆ. ಸಹಕಾರ ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆ ಗಮನಿಸಿ ರಾಜ್ಯ ಸರ್ಕಾರ ಹಲವು ಬಾರಿ ಪುರಸ್ಕರಿಸಿದೆ. ಸಮಾಜ ಸೇವಾ ರತ್ನ, ವೈಶ್ಯರತ್ನ, ವಾಸವಿ ಸಿರಿ ಹಾಗೂ ಕರ್ನಾಟಕ ಭೂಷಣ ಮುಂತಾದ ಹತ್ತು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.



### ವಿ.ಶ್ರೀನಿವಾಸ, ಕಾರ್ಯದರ್ಶಿ

ವಾಣಿಜ್ಯ ಪದವೀಧರರಾಗಿರುವ ಇವರು ಹಲವಾರು ವರ್ಷಗಳ ಹಿಂದೆ ಮೈಸೂರಿನ ಮಹಾರಾಜರು ಸ್ಥಾಪಿಸಿದ್ದ

4ನೇ ಪುಟಕ್ಕೆ

# ಹಿರಿಯ ನಾಗರೀಕರಿಂದ ರಾಜ್ಯೋತ್ಸವ



**ಬಸವೇಶ್ವರನಗರ** ಹಿರಿಯ ನಾಗರೀಕ ವೇದಿಕೆ ದಿನಾಂಕ 6.11.2015ರಂದು ಬಸವೇಶ್ವರನಗರದ ಎಸ್‌ಬಿಐ ಕಾಲೋನಿಯ ಕ್ಲಬ್ ಹೌಸ್ ನಲ್ಲಿ ಶತಾಯುಷಿ ನಾಡೋಜ ಶ್ರೀ ಜಿ.ವೆಂಕಟಸುಬ್ಬಯ್ಯನವರನ್ನು ಸನ್ಮಾನ ಮಾಡಿ ಗೌರವಿಸುವ ಮುಖೇನ ಕನ್ನಡ ರಾಜ್ಯೋತ್ಸವವನ್ನು ಯಥೋಚಿತವಾಗಿ ಆಚರಿಸಿತು. ಸಮಾರಂಭದ ಅಧ್ಯಕ್ಷತೆಯನ್ನು ವೇದಿಕೆಯ ಅಧ್ಯಕ್ಷರಾದ ಶ್ರೀ ಜಿ.ಎ.ಬ್ರಹ್ಮದೇವರವರು ವಹಿಸಿದ್ದರು). ಗೌರವವನ್ನು ಸ್ವೀಕರಿಸಿ ಉತ್ತರಿಸುತ್ತಾ ನಾಡೋಜ ಜಿ.ವೆಂಕಟಸುಬ್ಬಯ್ಯನವರು ಹಿರಿಯ ನಾಗರೀಕರು ರಾಜ್ಯೋತ್ಸವ ಆಚರಿಸುತ್ತಿರುವುದನ್ನು ಶ್ಲಾಘಿಸಿ ತಮ್ಮನ್ನು ಗೌರವಿಸಿದ್ದಕ್ಕಾಗಿ ಸಂಸ್ಥೆಗೆ ವಂದನೆಗಳನ್ನು ಸಲ್ಲಿಸಿದರು. ಸಮಾರಂಭದಲ್ಲಿ ವೇದಿಕೆಯ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ರವೀಂದ್ರನಾಥ್, ಉಪಾಧ್ಯಕ್ಷರಾದ ಶ್ರೀ ಟಿ.ಪಿ.ಬಸವರಾಜು, ಕಾರ್ಯದರ್ಶಿ, ಶ್ರೀ ಹೆಚ್.ಎಸ್.ನಾಗರಾಜ್ ಮುಂತಾದ ಹಲವು ಗಣ್ಯ ಮಹನೀಯ ರಾಜರಿದ್ದರು. ಇಂಥಹ ನೂತನ ಕಾರ್ಯಕ್ರಮಗಳನ್ನು ಹಿರಿಯ ನಾಗರೀಕರ ಸಂಸ್ಥೆಗಳು ಆಚರಿಸುವುದು ಒಳ್ಳೆಯವೆಂದು ಈಚೆಗೆ ಅಭಿಪ್ರಾಯ ಬೆಳೆದಿರುವುದು ಶ್ಲಾಘನೀಯ.

## ಸೇವಾ ಬಳಗ

ಸುಜನ ಸಮಾಜವು ರಚಿಸಿರುವ ಸೇವಾ ಬಳಗದ ಬಗ್ಗೆ ಹಲವಾರು ಮಹನೀಯರು ವಿವರಗಳನ್ನು ಬಯಸಿ ದೂರವಾಣಿ ಮುಖಾಂತರ ವಿವರಗಳನ್ನು ಕೇಳುತ್ತಿರುವುದರಿಂದ ಈ ಮೂಲಕ ವಿವರಗಳನ್ನು ನೀಡುತ್ತದ್ದೇವೆ.

- ಸುಜನ ಸಮಾಜದ ಸೇವಾ ಕಾರ್ಯಗಳಿಗಾಗಿ ಕನಿಷ್ಟ ಒಂದು ಸಾವಿರ ರೂಪಾಯಿ ದೇಣಿಗೆ ಮತ್ತು ಆಡಳಿತಾತ್ಮಕ ವೆಚ್ಚಗಳಿಗಾಗಿ ಎರಡು ನೂರ ಐವತ್ತು ರೂಪಾಯಿಗಳನ್ನು ನೀಡಿದವರನ್ನು ಸೇವಾ ಬಳಗದ ಸದಸ್ಯರನ್ನಾಗಿ ಪರಿಗಣಿಸಲಾಗುವುದು.
- ಸೇವಾ ಬಳಗದ ಸದಸ್ಯರ ಸಭೆಯನ್ನು ಸಂಸ್ಥೆಯು ಆಗಿಂದಾಗ್ಗೆ ಏರ್ಪಡಿಸಿ, ಸಂಸ್ಥೆ ಕೈಗೊಳ್ಳಬಹುದಾದ/ ಕೈಗೊಳ್ಳಬೇಕಾದ ಸೇವಾ ಕಾರ್ಯಗಳ ಬಗ್ಗೆ ಸಮಾಲೋಚನೆ ಮಾಡಲಾಗುವುದು
- ಸುಜನ ಸಮಾಜವು ಪ್ರಕಟಿಸುತ್ತಿರುವ ಸುಜನ ಸಮಾಜ ಮಾಸಪತ್ರಿಕೆಯನ್ನು ಉಚಿತವಾಗಿ ನೀಡಲಾಗುವುದು.
- ಸುಜನ ಸಮಾಜದ ಚಟುವಟಿಕೆ/ಕಾರ್ಯಕ್ರಮಗಳಲ್ಲಿ ಆದ್ಯತೆಯ ಮೇಲೆ ಭಾಗವಹಿಸಲು ಅವಕಾಶ ಮಾಡಿಕೊಡಲಾಗುವುದು.
- ಸುಜನ ಸಮಾಜ ಕೈಗೊಳ್ಳುವ ಯೋಜನೆಗಳಿಂದ ಪ್ರಯೋಜನ ಪಡೆಯಬಹುದಾದಲ್ಲಿ ಸದಸ್ಯರು ಆದ್ಯತೆ ಮೇರೆ ಫಲಾನುಭವಿಗಳನ್ನು ಶಿಫಾರಸ್ಸು ಮಾಡಬಹುದು.

ಇನ್ನು ಮುಂದೆ ಇತರೆ ಸೇವಾ ಸಂಸ್ಥೆಗಳು ಸಹ ಸೇವಾ ಬಳಗದ ಸದಸ್ಯರಾಗಿ ಪರಿಗಣಿಸಲ್ಪಡಲು ಸಂಸ್ಥೆ ಅವಕಾಶ ಮಾಡಿಕೊಟ್ಟಿದೆ. ಇದರಂತೆ ಸದಸ್ಯ ಸಂಸ್ಥೆಯ ಎಲ್ಲಾ ಸದಸ್ಯರು ತಮ್ಮ ಪ್ರತಿನಿಧಿಗಳ ಮುಖಾಂತರ ಪ್ರಯೋಜನ ಪಡೆಯಬಹುದು. ಸಂಸ್ಥೆ 'ಸುಜನ ಸಮಾಜ' ಏರ್ಪಡಿಸುವ ಕಾರ್ಯಕ್ರಮಗಳಿಗೆ ತನ್ನ ಸದಸ್ಯರು ಭಾಗವಹಿಸಲು ಅವಕಾಶ ಮಾಡಿಕೊಡಬಹುದು. ಈ ರೀತಿ ಅವಕಾಶ ಪಡೆಯಲು ಸೇವಾ ಸಂಸ್ಥೆಗಳು ಸುಜನ ಸಮಾಜದ ಚಟುವಟಿಕೆಗಳಿಗೆ ಕನಿಷ್ಟ ನಾಲ್ಕು ಸಾವಿರ ರೂಪಾಯಿಗಳನ್ನು ದೇಣಿಗೆ ನೀಡಬೇಕು. ಆಡಳಿತಾತ್ಮಕ ವೆಚ್ಚಕ್ಕಾಗಿ ಒಂದು ಸಾವಿರ ಅಂದರೆ ಒಟ್ಟಾರೆ ಐದು ಸಾವಿರ ನೀಡಬೇಕಾಗುತ್ತದೆ.

## ಹೀಗೊಂದು ಪ್ರಾರ್ಥನೆ

ಇದೇ ಜಾಗದಲ್ಲಿ ಇದೇ ನಿಮಿಷದಲಿ
ಭವ್ಯ ಭಾವನೆ ಬೆಳೆಯಲಿ
ರಾಷ್ಟ್ರಪ್ರೇಮವು ಉಕ್ಕಲಿ
ಆನಂದ ಸ್ಫೂರ್ತಿಯು ಚಿಮ್ಮಲಿ

ನಾನು ನೀನು ಅವನು ಇವನು
ಎಂಬ ಭೇದವು ತೊಲಗಲಿ
ರಾಷ್ಟ್ರಪ್ರೇಮದ ಸ್ವಾಭಿಮಾನವು
ತುಂಗೆಯಾಗಿ ಹರಿಯಲಿ ಗಂಗೆಯಾಗಿ ಸೂಸಲಿ

ದೇಶಸೇವೆಯ ಪುಣ್ಯ ಸ್ಫೂರ್ತಿಯು
ಕಣಕಣದಲಿ ಮಿಡಿಯಲಿ
ಧೀರಯೋಧರ ತ್ಯಾಗ ಸ್ಮರಣೆಯು
ಅಂತರಾಳವ ಮುಟ್ಟಲಿ ಅನಂತ ಪೂಜೆ ನಡೆಯಲಿ

ದಾಸ್ಯ ಭಾವನೆ ದೂರವಾಗಿ ಸ್ವಾಭಿಮಾನವು ಚಿಮ್ಮಲಿ
ಭರತ ಭೂಮಿಯ ಭ್ರಾತೃಪ್ರೇಮವು
ಮೇರುಗಿರಿಯ ಮುಟ್ಟಲಿ
ರಾಷ್ಟ್ರಜ್ಯೋತಿ ಬೆಳಗಲಿ

ಜನ್ಮಭೂಮಿ ಭಾರತ ವಿಶ್ವದಲ್ಲಿ ಮೆರೆಯಲಿ
ಸರ್ವಧರ್ಮದ ಶಾಂತಿ ಸೂತ್ರವು
ಭರತಭೂಮಿಯೆ ಆಗಲಿ
ರಾಷ್ಟ್ರಗೀತೆ ಮೊಳಗಲಿ

ಜನಗಣಮನ ಅಧಿನಾಯಕ ಜಯಹೇ
ಜನಗಣಮನ ಅಧಿನಾಯಕ ಜಯಹೇ
ಜಯಹೇ ಜಯಹೇ ಜಯಹೇ
ಜಯಹೇ ಜಯಹೇ ಜಯಹೇ



ರಚಿಸಿದವರು
ಹೆಚ್.ಮಂಜಪ್ಪ
ಪ್ರೊಫೆಷನಲ್ ಕೌನ್ಸೆಲರ್
ಅಂಡ್ ಸೈಕೋಥೆರಪಿಸ್ಟ್
ಮೊಬೈಲ್: 8050607016

SUJANA SAMAJA


2ನೇ ಪುಟದಿಂದ..



ಮೈಸೂರು ಲ್ಯಾಂಪ್ ವರ್ಕ್ಸ್‌ನಲ್ಲಿ ಸೇವೆ ಸಲ್ಲಿಸಿ, ಸ್ವಯಂ ನಿವೃತ್ತಿ ಪಡೆದು ಈಗ ಸುಮಾರು ಹತ್ತು ವರ್ಷಗಳಿಂದ ಪುಸ್ತಕ ಪ್ರಕಾಶನ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ನೂರು ವರ್ಷಗಳ ಸಾರ್ಥಕ ಸಮಾಜ ಸೇವಾ ಸಲ್ಲಿಸಿರುವ ಮಲ್ಲೇಶ್ವರದ ಥಿಯೋಸಾಫಿಕಲ್ ಸೊಸೈಟಿಯ ಕಾರ್ಯದರ್ಶಿಯಾಗಿ ಅದರ ಪ್ರಗತಿಗೆ ಕಾರಣರಾಗಿದ್ದಾರೆ.

## ಟಿ.ಎಸ್.ನಾರಾಯಣಮೂರ್ತಿ,

**ಸಹಕಾರ್ಯದರ್ಶಿ**



ಬೆಂಗಳೂರು ಜಿಲ್ಲೆ ದೊಡ್ಡಬಳ್ಳಾಪುರದಲ್ಲಿ ಜನಿಸಿ ಹಲವಾರು ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಇವರು ಈಗ ಬೆಂಗಳೂರಿನ ಮಲ್ಲೇಶ್ವರದ ಬಡಾವಣೆಯ ವಾಸಿಯಾಗಿದ್ದು ಅಲ್ಲಿನ ಹಲವಾರು ಸಮಾಜಸೇವಾ ಕಾರ್ಯಕ್ರಮಗಳಲ್ಲಿ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.



## ಹೆಚ್.ಎಸ್.ನಾಗರಾಜ,

**ಕೋಶಾಧಿಕಾರಿಗಳು**

ಎಪ್ಪತ್ತಾರು ವರ್ಷಗಳ ತರುಣರಾದ ಶ್ರೀಯುತರು ಮೈಸೂರು ವಿಶ್ವವಿದ್ಯಾಲಯದಿಂದ ಗಣಿತದಲ್ಲಿ ಮಾಸ್ಟರ್ಸ್ ಪದವಿ ಪಡೆದ ನಂತರ 1967ರಿಂದ 93ರವರೆಗೆ ಖ್ಯಾತ ಕಿರ್ಲೊಸ್ಕರ್ ಎಲೆಕ್ಟ್ರಿಕಲ್ ಕಂಪೆನಿಯಲ್ಲಿ ಕಂಪೂಟರ್ಸ್ ತಜ್ಞರಾಗಿ ಕೆಲಸ ಮಾಡಿ, ಅಲ್ಲಿನ ಕಂಪ್ಯೂಟರ್ ವಿಭಾಗದಲ್ಲಿ ಹಲವಾರು ಜವಾಬ್ದಾರಿ ಸ್ಥಾನಗಳಲ್ಲಿ ವೃತ್ತಿ ಮಾಡಿ ನಿವೃತ್ತರಾದರು. ಕಂಪ್ಯೂಟರ್ ಸೊಸೈಟಿ ಆಫ್ ಇಂಡಿಯಾ ಸಂಸ್ಥೆಯಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹಲವಾರು ಶೈಕ್ಷಣಿಕ ಗೋಷ್ಠಿಗಳು ಹಾಗೂ ತರಬೇತಿ ಕಾರ್ಯಕ್ರಮಗಳು ನಡೆಯಲು ಕಾರಣರಾಗಿರುತ್ತಾರೆ. ಹಲವಾರು ಸಂಸ್ಥೆಗಳಲ್ಲಿ ಕಂಪ್ಯೂಟರೀಕರಣ ಯಶಸ್ವಿಯಾಗಲು ಕಾರಣರಾಗಿದ್ದಾರೆ. ಅಲ್ಲದೆ ಕಡಂಬಿ ಸ್ವಾಯತ್ತ ಪದವಿ. ಪೂರ್ವ ಕಾಲೇಜಿನಲ್ಲಿ ಹಲವಾರು ವರ್ಷಗಳ ಕಾಲ ಅಧ್ಯಾಪಕರಾಗಿ ವಿದ್ಯಾರ್ಥಿಗಳ ಶ್ರೇಯಸ್ಸಿಗೆ ಕಾರಣರಾಗಿದ್ದಾರೆ. ಬಸವೇಶ್ವರನಗರ ಹಿರಿಯ ನಾಗರೀಕರ ವೇದಿಕೆಯ ಕಾರ್ಯದರ್ಶಿಯಾಗಿ 2009ನೇ ಇಸವಿಯಿಂದ ಹಿರಿಯ ನಾಗರಿಕರ ಹಲವಾರು ಚಟುವಟಿಕೆಗಳಿಗೆ ಕಾರಣರಾಗಿದ್ದಾರೆ. ನಲವತ್ತು ವರ್ಷಗಳಿಗೂ ಮೇಲ್ಪಟ್ಟು ಹಲವಾರು ಸಂಸ್ಥೆಗಳಲ್ಲಿ ಜವಾಬ್ದಾರಿ ಸ್ಥಾನಗಳ ಮುಖಾಂತರ ಸಮಾಜದ ಸೇವೆ ಸಲ್ಲಿಸುತ್ತಿದ್ದಾರೆ. 1930ರಲ್ಲಿ ಇಂಗ್ಲೆಂಡಿನ 'ಬ್ರಶ್' ಎಲೆಕ್ಟ್ರಿಕಲ್ಸ್ ಸಂಸ್ಥೆಯಲ್ಲಿ ತರಬೇತಿ ಪಡೆದದ್ದೆ ಅಲ್ಲದೆ, ಫ್ರಾನ್ಸ್, ಜರ್ಮನಿ ಹಾಗೂ ಸ್ವಿಟ್ಜರ್‌ಲೆಂಡ್ ದೇಶಗಳಲ್ಲಿ ನಡೆದ ಹಲವಾರು ತಂತ್ರಜ್ಞಾನ ಸಮಾವೇಶಗಳಲ್ಲಿ ಭಾಗವಹಿಸಿದ್ದಾರೆ.

## ಪಿ.ವಿ.ನಾಗಲತಾ, ಸದಸ್ಯರು



ವಿಜ್ಞಾನದಲ್ಲಿ ಪದವಿ ಪಡೆದು ಹಿಂದಿ ಸಾಹಿತ್ಯದಲ್ಲಿ ಎಂ.ಎ. ಪದವಿ ಪಡೆದವರು. ಶ್ರೀಮತಿಯವರು ಬ್ಯಾಂಕಿಂಗ್ ಕ್ಷೇತ್ರದಲ್ಲೂ ಇಪ್ಪತ್ತೈದು ವರ್ಷಕಾಲ ಸೇವೆ ಸಲ್ಲಿಸಿದ್ದ ಅಲ್ಲದೆ ಶೇಷಾದ್ರಿಪುರದಲ್ಲಿರುವ ಮಹಿಳಾ ಕೋ. ಆಪರೇಟಿವ್ ಬ್ಯಾಂಕಿನಲ್ಲಿ ಏಳು ವರ್ಷಗಳ ಕಾಲ ವೃತ್ತಿಪರ ಗೌರವ ನಿರ್ದೇಶಕರಾಗಿ ಕೆಲಸ ಮಾಡಿರುತ್ತಾರೆ. ಪ್ರಸ್ತುತ ಗಾಂಧಿ ಪ್ರಿಯೂನಿವರ್ಸಿಟಿ ಕಾಲೇನಿನಲ್ಲಿ ಅಧ್ಯಾಪಕರಾಗಿ ಕರ್ತವ್ಯನಿರ್ವಹಿಸುತ್ತಿದ್ದಾರೆ. ಇವುಗಳೆ ಅಲ್ಲದೆ ಹಲವಾರು ಸಮಾಜ ಸೇವಾ ಸಂಸ್ಥೆಗಳಲ್ಲಿ ಸುಮಾರು ಮೂವತ್ತು ವರ್ಷಗಳಿಗೂ ಮೇಲ್ಪಟ್ಟು ಕ್ರಿಯಾಶೀಲರಾಗಿ ತೊಡಗಿಸಿಕೊಂಡಿದ್ದು ಹೆಚ್ಚಿನ ಸಮಾಜಸೇವೆಯಲ್ಲಿ ಆಸಕ್ತರಾಗಿದ್ದಾರೆ.

## ಸುಮಂಗಲಿ ಆರ್.ಎಂ, ಸದಸ್ಯರು



ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ಜನಿಸಿ ಪ್ರಾಥಮಿಕ ಅಭ್ಯಾಸ ಮಾಡಿದ ನಂತರ ಆಂಧ್ರಪ್ರದೇಶದ ಹಿಂದೂಪುರದಲ್ಲಿ ಪದವೀಧರರಾದರು. ನಂತರ 2007ನೇ ಇಸವಿಯಲ್ಲಿ ಇಂಗ್ಲೀಷಿನಲ್ಲೂ ಎಂ.ಎ ಪದವಿ ಪಡೆದರು. ಶ್ರೀ ಮಂಜುನಾಥರವರನ್ನು ವಿವಾಹವಾದ ನಂತರ ಬೆಂಗಳೂರಿನಲ್ಲಿನ ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆಗಳ ಮುಖಾಂತರ ಹಲವಾರು ರೀತಿಯ ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡರು. 2001ರಿಂದ ಪೀಣ್ಯ, ಯಶವಂತಪುರದ ಲಯನ್ಸ್ ಕ್ಲಬ್ ಹಲವಾರು ಜವಾಬ್ದಾರಿ ಸ್ಥಾನಗಳಲ್ಲಿ ಸಮರ್ಥವಾಗಿ ಸೇವೆಸಲ್ಲಿಸಿದ್ದಾರೆ. ಲಯನ್ಸ್ ಕ್ಲಬ್‌ನಲ್ಲಿ ಕಾರ್ಯದರ್ಶಿಯಾಗಿ ಹಲವಾರು ಸಮಿತಿಗಳ ಛೇರ್ಮನ್ ಆಗಿ, ಅಧ್ಯಕ್ಷಿಣಿಯಾಗಿ ಕರ್ತವ್ಯ ನಿರ್ವಹಿಸಿರುವುದೇ, ಅಲ್ಲದೆ ಈಗಲೂ ಲಯನ್ಸ್ ಸಮಾಜ ಸೇವಾ ಕಾರ್ಯಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಉತ್ತಮ ಕಾರ್ಯದರ್ಶಿ, ಉತ್ತಮ ಅಧ್ಯಕ್ಷಿಣಿಯಾಗಿ ಜಿಲ್ಲಾಮಟ್ಟದಲ್ಲಿ ಗುರುತಿಸಿ ಗೌರವಿಸಲ್ಪಟ್ಟಿದ್ದಾರೆ. ಲಯನ್ಸ್ ಸಂಸ್ಥೆಯೇ ಅಲ್ಲದೆ ನೈಟಿಂಗೇಲ್ ಹಾಗೂ ವಾಸವಿ ಕ್ಲಬ್‌ಗಳಲ್ಲಿ ಪದಾಧಿಕಾರಿಯಾಗಿ ಯಶಸ್ವಿಯಾಗಿದ್ದಾರೆ.

**ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನ, ಚುಟುಕಗಳು, ಹನಿಗವನ ಗಳು, ನಾಣ್ಣುಡಿಗಳನ್ನು ಎಲ್ಲರೂ ಕಳುಹಿಸಿಕೊಡಬೇಕೆಂದು ಕೋರಲಾಗಿದೆ.**

Printed by Sri V. SRINIVASA, Published by Sri V. SRINIVASA
Editor : V. SRINIVASA, for & behalf of "SUJANA SAMAJA"
# 20/1, Siddashrama Road, 17th Cross, Malleshwaram, Bengaluru - 560 003